ಬಸ್ಸು ಹೊರಟು ಹೋಗುವುದು ಸರೀ ಆಯಿತು. ಇನ್ನು 5 ಗಂಟೆಗೆ ಬಸ್ಸೊಂದು ಇದೆ, ನಾವು ಅದಕ್ಕೇ ಕಾಯುವುದು ಅಂತ ಒಬ್ಬರು ಹೇಳಿದರು. ನೋಡಿದರೆ ಅಲ್ಲೂ ರಾಶಿ ಜನ. ಅಷ್ಟರಲ್ಲಿ ನಮ್ಮೂರ ಬೋರ್ಡ್ ಹೊತ್ತ ಬಸ್ಸು ಬರುವುದು ಕಂಡಾಕ್ಷಣ ಎಲ್ಲರೂ ಓಡಿದ್ದೇ ಓಡಿದ್ದು. ನಂತರ ಹುಡುಕಲು ತಾಪತ್ರಯ ಆಗುತ್ತದೆ ಅಂತ ಮೊದಲೇ ಒಂದು ಕರ್ಚೀಪು ಒಂದು ನೋಟು ಬುಕ್ ತೆಗೆದು ಇಟ್ಟಿದ್ದೆ. ಹೇಗೋ ಬಸ್ಸಿನಿಂದ ಇಳಿಯುವವರ ಕೈಗೆ ವರ್ಗಾಯಿಸಿ ನಿರಾಳವಾಗುವಷ್ಟರಲ್ಲಿ ಕಂಡಕ್ಟರ್ ನಮ್ಮನ್ನು ಯಾರನ್ನೂ ಹತ್ತಲು ಬಿಡದೆ, ಈ ಬಸ್ಸು ಅಲ್ಲಿಗೆ ಹೋಗಲ್ಲ, ನೋಡಿ ನಿಮ್ಮೂರ ಬಸ್ಸು ಅಲ್ಲಿ ನಿಂತಿದೆ ಅಂದರು. ಎಲಾ ..ಮಾಯೆಯೇ? ಇದೆಂತ ಕಣ್ಕಟ್ಟು? ಹೊಸ ಟರ್ಕಿ ಟವೆಲು, ವಿಚಾರ ಗೋಷ್ಠಿಗೆ ಬರೆದಿಟ್ಟ ಭಾಷಣದ ತುಣುಕಿನ ನೋಟ್ ಪ್ಯಾಡ್ ಆ ಬಸ್ಸಿನೊಳಗೆ ಬಾಕಿ. 'ಸಾರ್ ಆ ನೋಟ್ ಪ್ಯಾಡ್ ಕೊಡಬಹುದಾ' ಕೇಳಿದೆ. 'ಹೋಗಿಯಮ್ಮ... ಆ ಬಸ್ಸು ಹತ್ತಿ. ನಾ ತಂದು ಕೊಡುತ್ತೇನೆ' ಹೇಳಿದರು. ಪಾಪ! ಬಸ್ಸು ಬಂದ ಖುಷಿಗೆ ಒಬ್ಬಳು ತನ್ನ ಚೂಡಿದಾರದ ಶಾಲನ್ನೇ ಸೀಟಿಗೆ ಒಗೆದವಳು ಆ ಬಸ್ಸಿಗೆ ಓಡಲಾರದೇ, ಶಾಲು ಬಿಡಲಾರದೇ ಚಡಪಡಿಸುತ್ತಿದ್ದಳು. ನೀವು ಶಾಲು ತಕೊಂಡು ಬನ್ನಿ, ಸೀಟು ಇದ್ದರೆ ಇಡುತ್ತೇವೆ ಅಂತ ನಾವು ಬಸ್ಸಿನತ್ತ ಓಡಿದೆವು. ಬಸ್ಸು ಅದಾಗಲೇ ಭರ್ತಿ ಆಗಿತ್ತು. ಆದರೂ ಕಿಟಕಿ ಬದಿಯಲ್ಲಿ ಕುಳಿತವನ ಜೊತೆಗೆ ಹೇಳಿದೆ. 'ಒಂದು ಸೀಟು ಸಿಗಬಹುದಾ?' ಅಲ್ಲಿ ಇಲ್ಲಿ ನೋಡಿ, 'ಹಾ... ಇದೆ... ಏನಾದರೂ ಕೊಡಿ' ಅಂದ. ಕರ್ಚಿಪು, ನೋಟು ಪ್ಯಾಡ್ ಆ ಬಸ್ಸಿಗೆ ಹಾಕಿದ್ದೆ. ಇನ್ನೆಂತ ಕೊಡುವುದು? ತಲೆ ಓಡದೆ ಕೈಯಲ್ಲಿದ್ದ ವ್ಯಾನಿಟಿ ಬ್ಯಾಗನ್ನೇ ಅವನಿಗೆ ಕೊಟ್ಟುಬಿಟ್ಟೆ. ಅಲ್ಲಾ... ನನಗೊಬ್ಬಳಿಗೆ ಸಿಕ್ಕಿದರೆ ಸಾಕಾ? ಗೆಳತಿಗೂ ಬೇಕಲ್ವ? ಪ್ಲೀಸ್ ಇನ್ನೊಂದು ಬೇಕಿತ್ತು ಅಂತ ಅಂಗಲಾಚಿದೆ. ಕೊಡಿ ಕೊಡಿ ಬ್ಯಾಗ್ ಕೊಡಿ ಅಂದ. ಬೆನ್ನ ಹಿಂದೆ ಕೋಸಿದ್ದ ಕಿಟಕಿಯಲ್ಲಿ ನುಗ್ಗಲಾರದು ಅಂದುಕೊಂಡ ಬ್ಯಾಗನ್ನೇ ಹೇಗೋ ನುಗ್ಗಿಸಿ ಕಳಿಸಿಬಿಟ್ಟೆ. ಬಸ್ಸು ಒಳಗೆ ನುಗ್ಗಲು ಏನಿಲ್ಲ ಅಂದರೂ ಐದು ನಿಮಿಷ ಬೇಕು.

ಆಗ ಜ್ಞಾನೋದಯವಾಗಿದ್ದು. ವ್ಯಾನಿಟಿ ಬ್ಯಾಗಿನಲ್ಲಿ ಒಂದಷ್ಟು ಹಣ, ಮೊಬೈಲ್ ಎಲ್ಲಾ ಇತ್ತು. ಎಂತ ಮಾಡುವುದು ಈಗ? ಹಣ ಎಗರಿಸಿ ಬಿಟ್ಟರೆ? ಬೇಕಿತ್ತಾ ಪರ್ಸನ್ನೇ ಕೊಡುವ ಕೆಲಸ. ಹೆದರಿಕೆಯಿಂದಲೇ ಬಸ್ಸು ಹತ್ತಿದೆ. ಯಾರಿಗೆ ಸೀಟು ಇಡಲು ಹೇಳಿದ್ದೇನೆ ಅನ್ನುವುದೇ ಮರೆತು ಹೋಗಿತ್ತು. ಅವನೇ ಕರೆದ... 'ಬನ್ನಿ ಮೇಡಂ' ಹೋದ ಜೀವ ಬಂದ ಹಾಗೆ ಆಯಿತು. ನನಗಿಂತ ಒಂದ್ಹತ್ತು ವರುಷ ಸಣ್ಣವ ಇದ್ದಿರಬಹುದು. ಅವನಿಗೊಂದು ಥ್ಯಾಂಕ್ಸ್ ಹೇಳಿ ಕುಳಿತೆ. ಆದರೂ ಎದೆಯಲ್ಲಿ ಪುಕುಪುಕು. ಅಷ್ಟರಲ್ಲಿ ಗೆಳತಿಯ ಫೋನು. ನಾನು ಮಾತಾಡುತ್ತಾ ಬಸ್ಸು ತಪ್ಪಿ ಹೋಗುತ್ತದೆ ಅನ್ನುವ ಗಡಿಬಿಡಿಯಲ್ಲಿ ಅಲ್ಲಿ ಸಿದ್ಧವಿದ್ದ ತಿಂಡಿ ಕಾಫಿಯನ್ನು ಬಿಟ್ಟು ಬಂದಿದ್ದೆ, ಈಗ ಹಸಿವಾಗುತ್ತಿದೆ. ನನಗಾದರೂ ತೊಂದರೆ ಇಲ್ಲ, ನನ್ನ ಜತೆ ಬಂದ ಗೆಳತಿಗೆ ಶುಗರ್ ಇದೆ. ನೆಕ್ಸ್ಟ ನಿಲ್ದಾಣದಲ್ಲಿ ಐದು ನಿಮಿಷವೂ ನಿಲ್ಲದೆ ಹೋಗ್ತದೆ. ಏನು ಮಾಡುವುದು ಗೊತ್ತಾಗ್ತಿಲ್ಲ ಅಂದಿದ್ದೆ. ಮುಂದಿನ ನಿಲ್ದಾಣ ಬಂದಾಗ ಸಂಜೆ ಗಂಟೆ ಏಳಾಗಿತ್ತು. ನನ್ನ ಪಕ್ಕದವನು ಅದೇ ನಿಲ್ದಾಣದಲ್ಲಿ ಇಳಿದ. ನಾನಿನ್ನೂ ಫೋನಿನಲ್ಲೇ ಮಾತಾಡುತ್ತಿದ್ದೆ. ಇನ್ನೇನು ಬಸ್ಸು ಹೊರಡಬೇಕು ಅಂದಾಗ ಓಡೋಡಿ ಬಂದು ಕಿಟಕಿಯಲ್ಲಿ ಎರಡು ಪ್ಯಾಕ್ ಬಿಸ್ಕತ್ ಕೊಟ್ಟು ಹೋದ. ಒಂದು ಫೋನು ನಂಬರಿಲ್ಲ. ಅವನಿಗೆ ಹೇಗೆ ಕೃತಜ್ಞತೆ ಅರ್ಪಿಸುವುದು? ಛೇ! ನಾವು ಅಂದುಕೊಳ್ಳುವುದೇ ಬೇರೆ, ಆಗುವುದೇ ಬೇರೆ. ಮನೆಗೆ ಬಂದು ಗೆಳತಿಯ ಜೊತೆಗೆ ಪ್ರವರ ಒಪ್ಪಿಸಿದೆ. 'ಆದರೂ ಎಂತ ಪೆದ್ದಿ ಮಾರಾಯ್ತಿ ನೀನು? ನಿನಗೆ ದುಡ್ಡು ಮುಖ್ಯವಾ? ಸೀಟು ಮುಖ್ಯವಾ?' ಅಂದಳು.

ಅವಳಿಗೆ ನಾನು ಕೊಡುವ ಉತ್ತರ ಬಸ್ಸಿನೊಳಗೊಬ್ಬ ಅನಾಮಿಕನ ಮಾನವೀಯತೆಗೆ ಸರಿಸಾಟಿಯಲ್ಲದ್ದು ಅನ್ನಿಸಿತು. ಪ್ರತೀ ಬಸ್ಸು ಪ್ರಯಾಣವೂ ಎಚ್ಚರಿಕೆಯನ್ನೂ ಜಾಗ್ರತೆಯನ್ನೂ ಜೊತೆಗೆ ನನ್ನ ಬರಹಗಳಿಗೆ ಒಂದಷ್ಟು ದಾಸ್ತಾನನ್ನೂ ಒದಗಿಸುವುದಂತು ಸತ್ಯ ಅಂದೆ.

ಅಂದ ಹಾಗೆ ಈಗ ಲೋಕದರ್ಶನ ಕೈಗೊಂಡಿರುವ ನನ್ನ ನೀಲಿ ಕರ್ಚೀಪು ಮತ್ತು ಕವಿತೆಯ ಟಿಪ್ಪಣಿಯ ನೋಟ್ ಪ್ಯಾಡ್ ಯಾರಿಗಾದರೂ ಸಿಕ್ಕರೆ ಹೇಳಿ.

●